# ಇದು ಮೊದಲನೇ ಹಾಡು, ಹೇಗೋ ಏನೋ ಅರಿಯೇ...

ನನ್ನವಳೇ,

ನೆಪಮಾತ್ರದ ಪರಿಚಯಕ್ಕೇ ‘ನನ್ನವಳೂ’ಂತ ಕರೀತಿದೀನಿ ಅಂತಾ ಕೋಪಿಸ್ಕೋಬೇಡ. ಇದು ನಿನ್ನನ್ನು ತಲುಪುತ್ತದೆಯೋ, ನೀನು ಇದನ್ನು ಓದುತ್ತೀಯೋ, ಇದು ಅರ್ಥವಾಗುತ್ತದೆಯೋ ಗೊತ್ತಿಲ್ಲ, ಆದರೂ ಹೇಳಿಬಿಡ್ತೀನಿ, ನೀನು ನನ್ನ ಮೊದಲನೇ ‘ನನ್ನವಳು’ ಅಲ್ಲ!

ಹುಬ್ಬುಗಂಟಿಕ್ಕಿಕೊಂಡರೂ ಚೆನ್ನಾಗೇ ಕಾಣ್ತೀಯಾಂತ ಅನಿಸುತ್ತೆ (ನಾನ್ಯಾವತ್ತೂ ನಿನ್ನನ್ನು ಪೆನ್ಸಿವ್ ಮೂಡ್‌ನಲ್ಲಿ ನೋಡೇ ಇಲ್ಲ ಬಿಡು). ಆದ್ರೂ ನಿನ್ನ ಸಿಟ್ಟು ನನಗೆ ಒಳ್ಳೇದಲ್ಲ, ಹಾಗಾಗಿ ಬೇಡ್ಕೋತಾ ಇದೀನಿ, ಸ್ವಲ್ಪ ಹಗುರವಾದ ಮನಸಿನಿಂದ ಇದನ್ನು ಪೂರ್ತಿಯಾಗಿ ಓದಿಬಿಡು.

ಹದಿನೈದು ವರ್ಷಗಳ ಹಿಂದೆ ನಾನು ಸ್ಕೂಲಿನಿಂದ ಸ್ಪೋರ್ಟ್ಸ್‌ಗಂತ ಇನ್ನೊಂದು ಜಿಲ್ಲೆಯ ಸ್ಕೂಲಿಗೆ ಹೋಗಿದ್ದೆ. ಅಲ್ಲಿ ಅವಳನ್ನು ನೋಡಿದ್ದೆ, ನನ್ನ ಮೊದಲನೇ ‘ನನ್ನವಳ’ನ್ನ! ಅವಳನ್ನು ನೋಡಿದ ಕೂಡಲೇ ನನಗೆ ನನ್ನ ಪ್ರಪಂಚ ಎಷ್ಟು ಸುಂದರ ಅನಿಸಿಬಿಟ್ಟಿತ್ತು. ನಾನೂ ಚಿಕ್ಕವನು, ಇನ್ನೂ ಹೈಸ್ಕೂಲ್ ಮೆಟ್ಟಿಲು ಹತ್ತಿದ್ದೆ, ಆದರೆ ಅವಳ ಕಂಡ ತಕ್ಷಣ, ನನ್ನ ಜೀವನದಲ್ಲಿ ಇದೂವರೆಗೂ ಏನೂ ಘಟಿಸಿಲ್ಲ, ಮುಂದೆಯೂ ಏನೂ ಘಟಿಸುವುದಿಲ್ಲ, ಎಲ್ಲವೂ ಅವಳ ನಗುವಿನಲ್ಲಿ ಘನೀಭೂತಗೊಂಡು ಸ್ತಬ್ದವಾಗಿಬಿಟ್ಟಿದೆ ಅನಿಸಿ ಒಂದು ಸುಂದರವಾದ ಆಹ್ಲಾದತೆಯಲ್ಲಿ ಮುಳುಗಿಹೋಗಿದ್ದೆ. ಅವಳು ಯಾರು, ಏನು ಹೆಸರು ಎಂಬಿತ್ಯಾದಿ ವಿವರಗಳ ಬಗ್ಗೆ ತಲೆಕೆಡಿಸಿಕೊಳ್ಳುವಷ್ಟು ಬುದ್ದಿಬಲಿತಿರಲಿಲ್ಲ ಆಗ. ಆ ಮೂರು ದಿನಗಳು ನನ್ನ ಜೀವನದ ಅತ್ಯಂತ ಸುಂದರವಾದ, ಮಧುರವಾದ ದಿನಗಳು. ಅಷ್ಟೇ!

ಸ್ಕೂಲಿನ ನಂತರ ಕಾಲೇಜು ನಂತರ ಈ ಉದ್ಯೋಗ; ಎಲ್ಲೆಲ್ಲೂ ಹುಡುಗಿಯರಿದ್ದರು, ಸ್ನೇಹಿತರು, ಸಿನೆಮಾ, ನಮ್ಮ ಚಾರಣಗಳು, ನನ್ನ ಓದು, ಎಕ್ಸಾಮಿನ ತಲೆನೋವು, ಸಂಗೀತ, ಎಲ್ಲವುಗಳ ಮಧ್ಯೆ ನಾನು ಕಳೆದುಹೋದೆ. ಸಮಯ ಬಂದಾಗ ನನಗಿಷ್ಟವಾಗುವ; ನನ್ನಪ್ಪ ಅಮ್ಮಂದಿರು ನೋಡುವ ಹುಡುಗಿಯನ್ನೇ ಮದುವೆಯಾಗೋಣ ಅಂತ ತೀರ್ಮಾನಿಸಿಕೊಂಡು ಸ್ವಲ್ಪ ದುಃಖಿತನಾಗಿದ್ದೆ. ಯಾಕೆಂದರೆ ಸ್ಕೂಲಿನ ನಂತರ ನನ್ನ ಬಹುಪಾಲು ಸ್ನೇಹಿತರಂತೆ ನನಗೂ ನನ್ನ ಹೃದಯವೀಣೆಯನ್ನು ಮೀಟುವ ‘ನನ್ನವಳು’ ಯಾರೂ ಸಿಕ್ಕಿರಲೇ ಇಲ್ಲ, ನೀನು ನನ್ನ ಜೀವನದಲ್ಲಿ ಬರುವವರೆಗೂ!

ಹಾಗಂತ ಇದು ಮೊದಲ ನೋಟದ ಪ್ರೇಮ ಅಂದ್ಕೋಬೇಡ! ನೀನು ನನ್ನ ಸನಿಹವೇ ಇದ್ದರೂ, ಸುತ್ತಮುತ್ತ ಸುಳಿಗಾಳಿಯಂತೆ ಸುಳಿಯುತ್ತಿದ್ದರೂ ನಮ್ಮಿಬ್ಬರ ಪರಸ್ಪರ ಪರಿಚಯವಾದುದ್ದು ಮಾತ್ರ ತೀರಾ ಇತ್ತೀಚೆಗೆ, ಅದೂ ನೆಪಮಾತ್ರದ್ದು. ಅದುವರೆಗೂ ನೀನು ಕಂಡಾಗಲೆಲ್ಲ ನಿನ್ನನ್ನು ಸುಮ್ಮನೆ ನೋಡುತ್ತಲೇ ಇರುತ್ತಿದ್ದೆ, ಕಾಲೇಜು ದಿನಗಳಲ್ಲಿ ಹುಡುಗಿಯರ ಬಗ್ಗೆ, ಅವರ ಸೊಕ್ಕಿನ ಬಗ್ಗೆ, ಸುಳ್ಳು ಸುಳ್ಳೇ ಮುನಿಸು, ಕಟ್ಟಪ್ಪಣೆಗಳ ಕುರಿತು ಸ್ನೇಹಿತರು ಆಡುತಿದ್ದ ಮಾತುಗಳನ್ನು ಕೇಳಿ ಹೆದರಿಕೊಂಡಿದ್ದ ನನಗೆ ಈಗೊಬ್ಬಳು ಗೆಳತಿ ಸಿಕ್ಕಿದ್ದಾಳೆ, ನನ್ನಂತೆಯೇ ಯೋಚಿಸುವವಳು; ತರಲೆಗಳನೆಲ್ಲ ನಗುನಗುತ್ತ ಸ್ವೀಕರಿಸಿ, ಅದಕ್ಕೆ ಪ್ರತಿ-ತರಲೆ ಹೂಡುವವಳು; ನೇರಾನೇರ ಎಗ್ಗುಸಿಗ್ಗಿಲ್ಲದೆಲ್ಲ ಮಾತನಾಡುವವಳು; ಶೋಷಣೆ-ಸಮಾಜ-ಲಿಂಗ ತಾರತಮ್ಯಗಳ ಮಾತಿಗೆ ಬಂದರೆ ಕಾಲುಕೆರೆದು ಜಗಳಕ್ಕೆ ನಿಲ್ಲುವವಳು, ಅವಳಿಂದಾಗಿಯೇ ನಾನು ಹುಡುಗಿಯರೆಂದರೇನು, ಕನಸು ನನಸುಗಳೇನು, ಎಂಬುದನ್ನು ಕಲಿತೆ, ಮತ್ತು ನಿನ್ನ ಬಗ್ಗೆ ನನಗಿದ್ದ ಮೆಚ್ಚುಗೆಯನ್ನು ಅವಳ ಬಳಿ ಹೇಳಿಕೊಂಡೆ, ಅವಳು ಗಹಗಹಿಸಿ ಅಟ್ಟಹಾಸಗೈದು ನಕ್ಕಳು, ಮತ್ತು ‘ಬೆಸ್ಟ್ ಆಫ್ ಲಕ್’ ಹೇಳಿದಳು!

ಬಹಳ ನಾಚಿಕೆಯವಳು ನೀನು, ಮಾತು ಕಡಿಮೆ. ಎಲ್ಲವನ್ನೂ ನಿನ್ನ ಕಣ್ಣ ಕನಸುಗಳಲ್ಲಿ ಅಳೆದು ಕನಸಿಗೊಪ್ಪದ ವಾಸ್ತವದ ತುಣುಕುಗಳನ್ನು ಚೆಲ್ಲಿಬಿಡುವವಳು. ನಿನ್ನಿಂದ ತಿರಸ್ಕೃತಗೊಂಡ ಕನಸುಗಳೆಲ್ಲ ನನ್ನ ದಾರಿಯುದ್ದಕ್ಕೂ ಹರಡಿ ನನಗೆ ನಿನ್ನ ಬಗ್ಗೆ ದೂರು ಹೇಳಲಾರಂಭಿಸಿದವು. ನಾನು ನಿನ್ನ ತಿರಸ್ಕೃತ ಕನಸುಗಳ ಕಾವಲಿಗೆ ನಿಂತೆ, ಅವುಗಳ ಆರೈಕೆ ಮಾಡಿದೆ, ನೀನೇಕೆ ಅವುಗಳನ್ನು ಕಣ್ಣಿಗಿಳಿಸಿಕೊಳ್ಳದೇ ಚೆಲ್ಲಿಬಿಟ್ಟೆ ಎಂಬುದನ್ನು ಅರ್ಥೈಸಿಕೊಳ್ಳಲಾರಂಭಿಸಿದೆ, ಯಾಕೆಂದರೆ ನಾನೂ ನಿನ್ನ ಮೆಚ್ಚುಗೆ ಗಳಿಸದ, ಕಣ್ಣಿಗೆ ಬಾರದ ಕನಸಾಗಬಾರದಲ್ಲ! ಹಾಗಾಗಿ ನಿನ್ನ ಕನಸಿನಲ್ಲಿ ಬರಬೇಕಾದರೆ; ಮನಸಿನಲ್ಲಿ ನಿಲ್ಲಬೇಕಾದರೆ ನಾನ್ಯಾವ ಕನಸುಕಟ್ಟಬೇಕು ಎಂಬುದರ ತಪನೆಗೆ ನಿಂತೆ. ನಿತ್ಯದ ನೋಟ ಮೆಚ್ಚುಗೆಗೆ ದಾರಿಯಾಯ್ತು. ಎಲ್ಲರೊಳಗಿದ್ದೂ ಎಲ್ಲರಂತಿಲ್ಲದ ನಿನ್ನ ನಡೆ-ನುಡಿ ಇಷ್ಟವಾಗಿ ಮೆಚ್ಚುಗೆ ಮನಸಿಗಿಳಿಯಿತು, ಮತ್ತು ಮನಸು ಮಾತನಾಡಿತು... ಈಗ ಅದರ ಮಾತನ್ನು ಕೇಳುವುದಷ್ಟೇ ನನ್ನ ಕೆಲಸ, ಮತ್ತು ಅದರ ಸಂದೇಶ, ಸಂವೇದನೆಗಳನ್ನು ನಿನಗೆ ತಲುಪಿಸುವುದೂ ನನ್ನ ಕೆಲಸ.

ನನಗೀಗ ಇಪ್ಪತ್ತೇಳು ವರ್ಷ ವಯಸ್ಸು. ನನ್ನ ಸ್ನೇಹಿತರೆಲ್ಲ, ನನಗಿಂತ ಚಿಕ್ಕವರೆಲ್ಲ ನನಗೂ ಮುಂದಿದ್ದಾರೆ, ಆರ್ಥಿಕವಾಗಿ ಸಬಲರಾಗಿದ್ದಾರೆ, ನಾನು ನನ್ನೂರಿಗೆ ಹೋಗಿಬಂದಷ್ಟೇ ಸರಾಗವಾಗಿ ವಿದೇಶಕ್ಕೆ ಹೋಗಿಬರುತಿದ್ದಾರೆ, ಪ್ರೀತಿಸಿದ್ದಾರೆ, ಮದುವೆಯಾಗಿದ್ದಾರೆ, ಮನೆ ಕಟ್ಟಿದ್ದಾರೆ, ಕನಸುಕಟ್ಟಿ ನನಸು ಮಾಡಿಕೊಳ್ಳುತಿದ್ದಾರೆ. ಯಾಕೆಂದರೆ ಈಗಿನ್ನೂ ನನ್ನ ನಿಲುಕಿಗೆ ಸಿಗುತ್ತಿರುವ ಇಂಜಿನಿಯರಿಂಗನ್ನು ಅವರು ಐದ್ವತ್ತು ವರ್ಷಗಳ ಹಿಂದೆಯೇ ಜಯಿಸಿಬಿಟ್ಟಿದ್ದಾರೆ. ನಾನು ಅವರೆಲ್ಲರಿಗಿಂತ ಅರ್ಹತೆಯಲ್ಲಿ ಕೆಳಗಿದ್ದೇನೆ. ಒಬ್ಬನೇ ಮುಗಿಯಲಾರದ ಓದು, ಈ ಕೆಲಸ, ಸಂಗೀತ, ಬರಹ, ಸ್ನೇಹಿತರ ಪ್ರೀತಿಯ ನಡುವೆ ನನ್ನ ಖಾಸಗೀ ಕನಸುಗಳನ್ನು ನೇಯ್ದುಕೊಳ್ಳುತಿದ್ದೇನೆ, ತಪಸ್ಸಿಗೆ ನಿಂತಿದ್ದೇನೆ, ನನ್ನ ಕೀಳರಿಮೆ, ಅಭದ್ರತೆ, ಭಯಗಳನೆಲ್ಲ ಮೆಟ್ಟಿನಿಂತು ಜೀವನದುದ್ದಕ್ಕೂ ನನ್ನವಳಾಗುವವಳಿಗಾಗಿ ಅರಸುತಿದ್ದೇನೆ, ಎದೆಯ ಪ್ರೀತಿಗೂಡನ್ನು ಅಣಿಮಾಡಿಕೊಳ್ಳುತಿದ್ದೇನೆ (ಅಮ್ಮ ಹೇಳುತಿದ್ದಾಳೆ, ನನ್ನ ಓದು ಮುಗಿದ ತಕ್ಷಣವೇ ಮದುವೆ)!

ಇಷ್ಟೆಲ್ಲ ಹೇಳಿದಮೇಲೆ ನಿನಗೆ ಅನುಮಾನ ಬಾರದೇ ಇರಲಾರದು, ನಿನಗೆ ನನ್ನನ್ನೇ ಪ್ರೀತಿಸುವಂತಹದೇನು ನನ್ನಲ್ಲಿದೆ? ಪ್ರೇಮ ಯಾರೊಬ್ಬರ ಹೃದಯ ನಿವೇದನೆಯಿಂದ ಹುಟ್ಟಲಾರದು. ನನ್ನೆಲ್ಲ ಸ್ನೇಹಿತರಿಗಿಂತ, ನೀನು ನೋಡುವ ಬೇರೆಲ್ಲ ಹುಡುಗರಿಗಿಂತ ಕಡಿಮೆಯವನಾದ ನನಗೇ ಯಾಕೆ ನೀನು 'ನನ್ನವಳಾ'ಗಬೇಕೆಂದರೆ ಹುಡುಗೀ, ನಾನು ನಿನಗೆ ನನ್ನನ್ನು ಪ್ರೀತಿಸಲು ನಾನಿರುವ ಪ್ರತೀದಿನ-ಪ್ರತಿಕ್ಷಣ ಅಸಂಖ್ಯ ಕಾರಣಗಳನ್ನು ಕೊಡಮಾಡುತ್ತೇನೆ, ಅವಿರತ ಕನಸುಗಳನ್ನು ನೇಯ್ದುಕೊಡುತ್ತೇನೆ, ಆ ಕನಸುಗಳನೆಲ್ಲ ನನಸಾಗಿಸಲು ಸದಾ ನಿನ್ನೊಡನಿರುತ್ತೇನೆ. ಜೀವನದ ಒಂದು ಕ್ಷಣವೂ 'ಇವನನ್ನ್ಯಾಕೆ ಪ್ರೀತಿಸಿದೆನೋ' ಎಂಬ ನೀರಸ ಭಾವ ಸುಳಿಯದಂತೆ ಕಾವಲಿರುತ್ತೇನೆ.

ಅಷ್ಟೇ. ಮೊದಲೇ ಹೇಳಿದಂತೆ ಇದು ನಿನ್ನನ್ನು ತಲುಪುತ್ತದೆಯೋ, ನೀನು ಇದನ್ನು ಓದುತ್ತೀಯೋ, ಇದು ಅರ್ಥವಾಗುತ್ತದೆಯೋ ಗೊತ್ತಿಲ್ಲ, ಇದು ನಿನ್ನನ್ನು ತಲುಪದಿದ್ದರೆ, ನಿನಗರ್ಥವಾಗದಿದ್ದರೆ ನಮ್ಮ ನಡುವೆ ಮಧುರವಾದುದೊಂದು ಘಟಿಸದಿದ್ದರೆ, ನಾನೇ ಧೈರ್ಯಸಾಲದೇ ಸುಮ್ಮನಾಗಿಬಿಟ್ಟರೆ ಇದೆಲ್ಲ ಭಾವ ನನ್ನೊಳಗೇ ಉಳಿದುಹೋಗುತ್ತದೆ. ನಾನು ಮತ್ತದೇ ದುಃಖಕ್ಕೆ ಮರಳುತ್ತೇನೆ, ಜೀವನ ಮುಂದುವರೆಯುತ್ತದೆ. ಮುಂದೆಂದಾದರೂ ಮೂರನೆಯ 'ನನ್ನವಳು' ಸಿಕ್ಕರೆ(!) ಇದು ನನ್ನ ಅಶಂಕಿತ-ಅಕಳಂಕಿತ ಪ್ರೇಮ ನಿವೇದನೆಗೊಂದು ನೆನಪಾಗುತ್ತದೆ, (ಮತ್ತು ಅದರಿಂದ ಆಕೆಗೇನಾದರೂ ಇಷ್ಟು ಸಲ ಸೋತವನಿಗೆ ಸೋತು ಅವನನ್ನು ಗೆಲ್ಲಿಸಿಬಿಡೋಣ ಅನಿಸಿಬಿಟ್ಟರೇ ಅದು ನಿನ್ನ ಮೇಲಿನ ಪ್ರೇಮಕ್ಕೆ-ನೆನಪಿಗೆ ಸಿಕ್ಕ ಜಯವಾಗುತ್ತದೆ). ಹಾಗಾಗದೇ ಗೆಳತಿ, ಇದೆಲ್ಲ ನಿನಗೆ ಅರ್ಥವಾಗಿ ನನ್ನ ಕೈಹಿಡಿದೆತ್ತಿ ನಿನ್ನ ಕನಸುಕಂಗಳಲ್ಲಿ ತುಂಬಿಕೊಂಡರೆ (ಈಗಲೇ ಒಲ್ಲದ ಹೃದಯದಿಂದ ನೆನೆಸುತ್ತಿರುವ) ಮೂರನೆಯ 'ನನ್ನವಳು' ಜೀವನ್ಮುಕ್ತಿಯ ತನಕ ಮರೆತ ಕತೆಯಾಗುತ್ತಾಳೆ! ನನ್ನ ಜೀವನ ನಿನ್ನೊಡನೆ ಪ್ರತೀನಿತ್ಯದ ಹುಣ್ಣಿಮೆಯಾಗುತ್ತದೆ... ನಮ್ಮಿಬ್ಬರ ಕನಸು-ನನಸು-ನೆನಪುಗಳೆಲ್ಲವೂ ಪ್ರತೀದಿನದ ದೀಪಾವಳಿಯಾಗುತ್ತವೆ...ಮತ್ತು ನಾನು ನಿನ್ನ ಪ್ರೀತಿಯಿಂದ ನನ್ನೆಲ್ಲ ಸ್ನೇಹಿತರಿಗಿಂತ ಶ್ರೀಮಂತನಾಗುತ್ತೇನೆ, ನಿನ್ನೊಡನೆ ಪ್ರೀತಿಯ ಔನ್ನತ್ಯವನ್ನೇರಿ ಅವರಿಗೆ ಹೊಟ್ಟೆ ಉರಿಸುತ್ತೇನೆ!(!)

ಅರ್ಥವಾಯಿತೇ ನನ್ನವಳೇ?